
ಕೆಲಸ ಕಲಿಯುವ ಅವಕಾಶ ನನ್ನದಾಯಿತು.

ಮುಂದೆ ವಿ.ಕೆ. ಮೂರ್ತಿ ಅವರದ್ದೇ ಒತ್ತಾಸೆಯಿಂದ ಗೋವಿಂದ್ ನಿಹಲಾನಿ ಸ್ವತಂತ್ರ ನಿರ್ದೇಶಕರಾದರು. ಗೋವಿಂದ್ ಸಜ್ಜನರು. ಅವರು ನನಗೆ ಅನೇಕ ಸೂಕ್ಷ್ಮಗಳನ್ನು ಕಲಿಸಿದರು. ಲೈಟಿಂಗ್ ಮಾಡುವಾಗ ಲೈಟ್ ಬಾಯ್ಸ್ ನೆರವನ್ನು ಪಡೆದುಕೊಂಡೇ ಮುಂದುವರಿಯಬೇಕು. ಮೊದಲಿಗೆ ಅವರು ಏನು ಮಾಡುತ್ತಾರೆ ಎನ್ನುವುದನ್ನು ಗಮನಿಸಬೇಕು. ಆಮೇಲೆ ಅಗತ್ಯ ಇದ್ದಲ್ಲಿ ಮಾರ್ಪಾಟುಗಳನ್ನು ಮಾಡಿಸಬೇಕಷ್ಟೆ ಎಂಬೆಲ್ಲ ಸಂಗತಿಗಳನ್ನು ಮನದಟ್ಟು ಮಾಡಿಸಿದರು. ನೀನಾಗಿಯೇ ಲೈಟ್ ಮುಟ್ಟಲು ಹೋಗಬೇಡ ಎಂದು ತಿಳಿ ಹೇಳಿದ್ದರು. ಅವರು ಅನೇಕ ಪುಸ್ತಕಗಳನ್ನು ಓದುತ್ತಿದ್ದರು. ನನಗೆ ಓದಿನ ರುಚಿ ಹತ್ತಿದ್ದು ಅವರಿಂದಲೇ.

◆ **ಅಲ್ಲಿಂದ ಕನ್ನಡ ಸಿನಿಮಾ ನಂಟು ಮೂಡಿದ್ದು ಹೇಗೆ?**

ಸಿನಿಮಾ ಚಿತ್ರೀಕರಣ ಮುಗಿದು, ಅಲ್ಪವಿರಾಮ ಸಿಕ್ಕಿದಾಗಲೆಲ್ಲ ನಾನು ತಿಪಟೂರಿಗೆ ಹೋಗುತ್ತಿದ್ದೆ. ಯಾಕೆಂದರೆ, ಆಗೆಲ್ಲ ಒಂದು ಸಿನಿಮಾ ಚಿತ್ರೀಕರಿಸಲು ಒಂದು ವರ್ಷ ತೆಗೆದುಕೊಳ್ಳುತ್ತಿದ್ದರು. ಹದಿನೆಂಟು ರೂಪಾಯಿ ಕೊಟ್ಟರೆ ರೈಲು ಟಿಕೆಟ್ ಸಿಗುತ್ತಿತ್ತು. ಹತ್ತಿಕೊಂಡು ಬರುತ್ತಿದ್ದೆ. ತಿಪಟೂರಿನಲ್ಲಿ ನಾನು ಔಷಧದ ಅಂಗಡಿ ಇಟ್ಟಿದ್ದೆ. ಅಲ್ಲಿ ನನ್ನ ಅಂಗಡಿಗೆ ತಿಪಟೂರು ರಘು ಬರುತ್ತಿದ್ದರು. ಅವರಿಗೂ ಸಿನಿಮಾ ಹುಚ್ಚು. ಇಬ್ಬರೂ ಮಾತುಕತೆ ನಡೆಸುತ್ತಿದ್ದುದರ ಫಲವಾಗಿ 'ಊರ್ವಶಿ' ಸಿನಿಮಾ ತಯಾರಿಗೆ ಮುಂದಾದೆವು. ನಾನು ಅದರ ಮುಖ್ಯ ಸಿನಿಮಾಟೊಗ್ರಫರ್ ಅಲ್ಲವಾದರೂ, ಆ ತಂಡದವರ ಜೊತೆ ಕೆಲಸ ಮಾಡಿದೆ. 1970ರಲ್ಲಿ ಶುರುವಾದ ಸಿನಿಮಾ ಅದು. ಅದನ್ನು ಮುಗಿಸಲು ಮೂರ್ನಾಲ್ಕು ವರ್ಷಗಳೇ ಬೇಕಾದವು.



ಬೆಂಗಳೂರಿಗೆ ಹೋಗಿದ್ದಾಗ ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಶರಪಂಜರ' ಸಿನಿಮಾ ನೋಡಿದೆ. ಶೀರ್ಷಿಕೆ ತೋರಿಸುವಾಗ ಡಿ.ವಿ. ರಾಜಾರಾಂ ಎಂಬ ಹೆಸರು ಬಂದೊಡನೆ ಪ್ರೇಕ್ಷಕರು ಜೋರು ಚಪ್ಪಾಳೆ ತಟ್ಟಿದರು. ಒಬ್ಬ ಸಿನಿಮಾಟೊಗ್ರಫರ್ ಹೆಸರು ಬಂದಾಗ ಜನರು ಇಷ್ಟೆಲ್ಲ ಮೆಚ್ಚಿಕೊಳ್ಳುತ್ತಾರೆಂದರೆ, ಅವರು ದೊಡ್ಡ ಪ್ರತಿಭಾವಂತರೇ ಇರಬೇಕು ಎಂದು ನಾನು ಭಾವಿಸಿದೆ. ಬರೀ ಚಪ್ಪಾಳೆ ತಟ್ಟಿದ್ದಷ್ಟೇ ಅಲ್ಲ, ಚಿಲ್ಲರೆ ಕಾಸನ್ನೂ ಎಸೆದರು. ನನಗೂ ಅಂಥದ್ದೇ ದೊಡ್ಡ ಸಿನಿಮಾಟೊಗ್ರಫರ್ ಆಗಬೇಕೆಂಬ ಮಹತ್ವಾಕಾಂಕ್ಷೆ ಮೂಡಿತು.

1972ರಲ್ಲಿ ಒಮ್ಮೆ ಹೋಟೆಲ್ ಒಂದರಲ್ಲಿ ರಾಜಾರಾಂ ಸಿಕ್ಕರು. ಅವರೊಟ್ಟಿಗೆ ಕೆಲಸ ಮಾಡಬೇಕು ಎಂಬ ನನ್ನ ಬಯಕೆಯನ್ನು ಹೇಳಿಕೊಂಡೆ. ನಾನು ಮೂರ್ತಿ ಅವರಲ್ಲಿ ಕೆಲಸ ಮಾಡಿದ್ದೇನೆಂದು ತಿಳಿದುಕೊಂಡವರೇ ಎರಡು ದಿನ ಬಿಟ್ಟು ಚಾಮುಂಡೇಶ್ವರಿ ಸ್ಟುಡಿಯೊಗೆ ಬರುವಂತೆ ಆಹ್ವಾನವಿತ್ತರು. ನಾನು ಖುಷಿಯಿಂದ ಹೋದೆ. 'ದೂರದ ಬೆಟ್ಟ' ಚಿತ್ರೀಕರಣ ನಡೆಯುತ್ತಿತ್ತು. ಅಲ್ಲಿಂದ ಕನ್ನಡ ಚಿತ್ರರಂಗಕ್ಕೆ ನನ್ನ ಅಧಿಕೃತ ಸೇರ್ಪಡೆ ಆದಂತಾಯಿತು. ಯಾವುದೇ ಸಿನಿಮಾ ಮಾಡಿದರೂ ಅದನ್ನು ಹಟ ತೊಟ್ಟು ಪೂರೈಸಲೇಬೇಕು ಎಂದು ನಾನು ಅದೇ ಸಂದರ್ಭದಲ್ಲಿ ನಿರ್ಧರಿಸಿದ್ದು.